ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ ಲಿ., ಧಾರವಾಡ.
ಕೇಂದ್ರ ಕಛೇರಿ : ಪೋಸ್ಟ್ ಬಾಕ್ಸ್ ನಂ. 21, ಸುಭಾಸ ರಸ್ತೆ, ಧಾರವಾಡ.
THE KARNATAK CENTRAL CO-OPERATIVE BANK LTD., DHARWAD.
HEAD OFFICE : P.B NO 21, SUBHAS ROAD, DHARWAD.
Ph:(0836)2443365/2444864 email:kccbdwd@gmail.com website:kccbankdharwad.in

ಕ್ರ: 814/ಆಡಳಿತ/ನೇಮಕಾತಿ-2022-23 ದಿ: 03.09.2022

# -:ನೇಮಕಾತಿ ಪ್ರಕಟಣೆ:-

ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಧಾರವಾಡ ಇದರಲ್ಲಿ ಖಾಲಿ ಇರುವ **87 ಕ್ಲರ್ಕ್ (ಸಹಾಯಕರು)** ಹುದ್ದೆಗಳನ್ನು ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್-ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬ್ಯಾಂಕಿನ ವೆಬ್‌ಸೈಟ್ www.kccbankdharwad.in ಗೆ ಅಪಲೋಡ ಮಾಡಿ ಅರ್ಜಿ ಸಲ್ಲಿಸತಕ್ಕದ್ದು. ನೇಮಕಾತಿ ಮಾಡಲು ಉದ್ದೇಶಿಸಿರುವ ಹುದ್ದೆಗಳನ್ನು ಕೆಳಗಿನಂತೆ ವರ್ಗೀಕರಿಸಿ ಮೀಸಲಿರಿಸಲಾಗಿದೆ.

## -:ಮೀಸಲಾತಿ ವಿವರ:-

| ಅ ನಂ | ಪ್ರವರ್ಗಗಳು | ಒಳ ಮೀಸಲಾತಿ | | | | | | | ಒಟ್ಟು |
|---|---|---|---|---|---|---|---|---|---|
| | | ಸಾಮಾನ್ಯ | ಮಹಿಳಾ | ಗ್ರಾಮೀಣ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತರು | ಮಾಜಿ ಸೈನಿಕ | ಅಂಗ ವಿಕಲ | |
| 1. | ಸಾಮಾನ್ಯ | 11 | 13 | 11 | 2 | 2 | 3 | 2 | 44 |
| 2. | ಪರಿಶಿಷ್ಟ ಜಾತಿ | 2 | 5 | 4 | 1 | 0 | 0 | 1 | 13 |
| 3. | ಪರಿಶಿಷ್ಟ ಪಂಗಡ | 1 | 1 | 1 | 0 | 0 | 0 | 0 | 3 |
| 4. | ಪ್ರವರ್ಗ- 1 | 1 | 1 | 0 | 0 | 0 | 0 | 1 | 3 |
| 5. | ಪ್ರವರ್ಗ- 2 ಎ. | 3 | 5 | 3 | 1 | 0 | 0 | 1 | 13 |
| 6. | ಪ್ರವರ್ಗ- 2 ಬಿ. | 1 | 1 | 0 | 0 | 0 | 0 | 1 | 3 |
| 7. | ಪ್ರವರ್ಗ- 3 ಎ. | 1 | 1 | 1 | 0 | 0 | 0 | 1 | 4 |
| 8. | ಪ್ರವರ್ಗ- 3 ಬಿ. | 1 | 2 | 0 | 0 | 0 | 0 | 1 | 4 |
| | ಒಟ್ಟು | 21 | 29 | 20 | 4 | 2 | 3 | 8 | 87 |

**1.ವೇತನ ಶ್ರೇಣಿ:** ರೂ.16000-400-17200-450-19000-500-21000-600-24600-700-28800-800-29600 ಮತ್ತು ನಿಯಮಾನುಸಾರ ತುಟ್ಟಿ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ನೀಡಲಾಗುವುದು.

**2.ವಿದ್ಯಾರ್ಹತೆ:**

- ಮಾನ್ಯತೆ ಪಡೆದ ಅಂಗೀಕೃತ ವಿಶ್ವವಿದ್ಯಾಲಯದ ಯಾವುದೇ ಪದವಿಯಲ್ಲಿ ಕನಿಷ್ಠ ಶೇಕಡ 60% ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ / ಪ್ರವರ್ಗ-1 ಅಭ್ಯರ್ಥಿಗಳಾಗಿದ್ದಲ್ಲಿ ಶೇಕಡ. 55% ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.
- ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.
- ಕಂಪ್ಯೂಟರ್ ಆಪರೇಶನ್ ಮತ್ತು ಅಪ್ಲಿಕೇಶನ್‌ನಲ್ಲಿ ಜ್ಞಾನ ಹೊಂದಿರಬೇಕು.

THE KARNATAK CENTRAL CO-OP. BANK LTD. R.No.1258 23-11-1916 RBI LSNo: RPCD (BG) DCCB 16/11-12 Dt: 12-12-2011 DHARWAD

**3.ವಯೋಮಿತಿ:**

ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕಕ್ಕೆ ಕನಿಷ್ಟ 18 ವರ್ಷಗಳು

| ವರ್ಗ | ಗರಿಷ್ಟ ವಯೋಮಿತಿ |
|---|---|
| ಸಾಮಾನ್ಯ ವರ್ಗಕ್ಕೆ | 35 ವರ್ಷಗಳು, |
| ಇತರೆ ಹಿಂದುಳಿದ ವರ್ಗಗಳು | 38 ವರ್ಷಗಳು, |
| ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 | 40 ವರ್ಷಗಳು |
| ಮಾಜಿ ಸೈನಿಕರು (15 ವರ್ಷ ಸೇವೆ ಸಲ್ಲಿಸಿರಬೇಕು) | 45 ವರ್ಷಗಳು, |

ಅಂಗವಿಕಲರು ಮತ್ತು ವಿಧವೆಯರಿಗೆ ಆಯಾ ವರ್ಗಗಳಿಗೆ ನಿಗದಿತ ಗರಿಷ್ಟ ವಯೋಮಿತಿಗೆ 10 ವರ್ಷ ವಯೋಮಿತಿ ಸಡಿಲಿಕೆ ಇರುತ್ತದೆ.

**4.ಅರ್ಜಿ ಸಲ್ಲಿಕೆಗೆ ನಿಗದಿ ಪಡಿಸಿದ ಅವಧಿ:**

| | |
|---|---|
| **ಪ್ರಾರಂಭದ ದಿನಾಂಕ** | 06.09.2022 ರ ಬೆಳಿಗ್ಗೆ 11.30 ರಿಂದ |
| **ಕೊನೆಯ ದಿನಾಂಕ** | 30.09.2022 ರ ಸಂಜೆ 5.30 ರವರೆಗೆ |

*ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

**5. ಅರ್ಜಿ ಶುಲ್ಕ:**

ಸಾಮಾನ್ಯ ಅಭ್ಯರ್ಥಿಗಳು ಮತ್ತು ಹಿಂದುಳಿದ ವರ್ಗದ ಅಭ್ಯರ್ಥಿಗಳು ರೂ.1000/- + ಜಿ.ಎಸ್.ಟಿ ರೂ.180/-**ಒಟ್ಟು ರೂ.1180/-** ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1/ ಅಂಗವಿಕಲರು/ ಮಾಜಿ ಸೈನಿಕ/ವಿಧವಾ ಅಭ್ಯರ್ಥಿಗಳು ರೂ.500/- + ಜಿ.ಎಸ್.ಟಿ ರೂ.90/- **ಒಟ್ಟು ರೂ.590/-** ಗಳನ್ನು ನಿಗದಿಪಡಿಸಲಾಗಿದೆ.

- ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ನಿಗದಿತ ಶುಲ್ಕವನ್ನು ಕೆಳಕಾಣಿಸಿದ ಖಾತೆಗೆ ನೆಫ್ಟ್ **(NEFT)** ಮೂಲಕ ಜಮಾ ನೀಡಿ **UTR** ನಂಬರ್‌ನ್ನು ಆನ್‌ಲೈನ್ ಅಪ್ಲಿಕೇಶನ್ ಫಾರ್ಮ್ ನಲ್ಲಿ ನಮೂದಿಸಿ ಚಲನ್ ಪ್ರತಿ ಅಪ್‌ಲೋಡ ಮಾಡತಕ್ಕದ್ದು.
- ತಪ್ಪಾದ ನಂಬರ/ಮಾಹಿತಿಯನ್ನು ನಮೂದಿಸಿದ್ದಲ್ಲಿ ಅಭ್ಯರ್ಥಿಗಳೇ ಜವಾಬ್ದಾರರು.

| | |
|---|---|
| A/C Name | THE KARNATAKA CENTRAL COOPERATIVE BANK LTD., |
| A/C No | 197005395426 |
| IFSC Code | KSCB0015001 |
| Bank Name | THE KARNATAKA CENTRAL COOPERATIVE BANK LTD., HEAD OFFICE BRANCH , DHARWAD |

- ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕವಾದ **: 30-09-2022** ರ ನಂತರ ಶುಲ್ಕವನ್ನು ಸಂದಾಯ ಮಾಡಿದ್ದಲ್ಲಿ, ಅಂತಹವರ ಅರ್ಜಿಯನ್ನು ತಿರಸ್ಕರಿಸಲಾಗುವುದು.

THE KARNATAK CENTRAL CO-OP BANK LTD. No.1258 23-11-1916 RBI LSNo: RPCD (BG) DCCB 16/11-12 Dt: 12-12-2011 DHARWAD

- ಅರ್ಜಿಗಳನ್ನು ಭರ್ತಿ ಮಾಡಲು ಮತ್ತು ಶುಲ್ಕ ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ, ಆ ಮುಂದಿನ ಕೆಲಸದ ದಿನವು ಅರ್ಜಿಗಳನ್ನು ಭರ್ತಿ ಮತ್ತು ಶುಲ್ಕ ಪಾವತಿಸಲು ಕೊನೆಯ ದಿನಾಂಕವಾಗುವುದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ.

**6. <u>ಜಾತಿ /ಮೀಸಲಾತಿ ಪ್ರಮಾಣಪತ್ರಗಳು</u> :**

ಜಾತಿ/ಮೀಸಲಾತಿ ಕೋರ ಬಯಸುವ ಅಭ್ಯರ್ಥಿಗಳು ಈ ಕೆಳಗಿನಂತೆ ಮೀಸಲಾತಿ ಪ್ರಮಾಣಪತ್ರಗಳನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಸಂಭಂದಪಟ್ಟ ಪ್ರಾಧಿಕಾರದಿಂದ ಪಡೆದಿರಬೇಕು. ಹಾಗೂ ಚಾಲ್ತಿಯಲ್ಲಿರತಕ್ಕದ್ದು ಅಂತಹ ದಾಖಲೆಗಳನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಬೇಕು.

1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಸೌಲಭ್ಯ ಪಡೆಯಲಿಚ್ಚಿಸುವ ಅಭ್ಯರ್ಥಿಗಳ ಪ್ರಮಾಣಪತ್ರ.
2. ಪ್ರವರ್ಗ– 2ಎ, 2ಬಿ, 3ಎ, 3ಬಿ ವರ್ಗದ ಸೌಲಭ್ಯ ಪಡೆಯಲಿಚ್ಚಿಸುವ ಅಭ್ಯರ್ಥಿಗಳ ಪ್ರಮಾಣಪತ್ರ.
3. <u>ಗ್ರಾಮೀಣ ಅಭ್ಯರ್ಥಿ</u>: ಗ್ರಾಮೀಣ ಮೀಸಲಾತಿ ಕೋರುವ ಅಭ್ಯರ್ಥಿಗಳು ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರವನ್ನು ಶಾಲಾ ಮುಖ್ಯೋಪಾದ್ಯಾಯರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲೆ ರುಜು ಪಡೆದು ದೃಢೀಕರಿಸಿದ ಪ್ರಮಾಣ ಪತ್ರ
4. <u>ಕನ್ನಡ ಮಾಧ್ಯಮ ಅಭ್ಯರ್ಥಿ</u>: ಕನ್ನಡ ಮಾಧ್ಯಮ ಮೀಸಲಾತಿ ಕೋರುವ ಅಭ್ಯರ್ಥಿಗಳು ಕನ್ನಡ ಮಾಧ್ಯಮ ಅಭ್ಯರ್ಥಿ ಪ್ರಮಾಣ ಪತ್ರವನ್ನು ಶಾಲಾ ಮುಖ್ಯೋಪಾಧ್ಯಾಯರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲೆ ರುಜು ಪಡೆದು ದೃಢೀಕರಿಸಿದ ಪ್ರಮಾಣ ಪತ್ರ.
5. <u>ಯೋಜನಾ ನಿರಾಶ್ರಿತರು</u>: ಸರ್ಕಾರದ ಆದೇಶದ ಅನುಸಾರ ಯೋಜನಾ ನಿರಾಶ್ರಿತರ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರ ನಿಗಧಿಪಡಿಸಿದ ನಮೂನೆಯಲ್ಲಿ ದೃಢೀಕರಿಸಿದ ಪ್ರಮಾಣ ಪತ್ರ.
6. <u>ಮಾಜಿ ಸೈನಿಕ ಅಭ್ಯರ್ಥಿ</u>: ಮಾಜಿ ಸೈನಿಕ ಅಂದರೆ ಭೂ–ದಳ, ನೌಕಾ–ದಳ, ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಇವರು ಸರ್ಕಾರದ ಜಾರಿಯಲ್ಲಿರುವ ನಿಯಮಗಳನ್ವಯ ದೃಢೀಕರಿಸಿದ ಮಾಜಿ ಸೈನಿಕ ಪ್ರಮಾಣ ಪತ್ರ.
7. <u>ಅಂಗವಿಕಲ ಅಭ್ಯರ್ಥಿ</u>: ಸರ್ಕಾರದ ಅಧಿಸೂಚನೆಯಲ್ಲಿ ಆದೇಶಿಸಿದಂತೆ ಅಂಗವಿಕಲರಿಗೆ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರ ನಿಗಧಿಪಡಿಸಿದ ನಮೂನೆಯಲ್ಲಿ ದೃಢೀಕರಿಸಿದ ಪ್ರಮಾಣ ಪತ್ರ.

**<u>7. ಅಭ್ಯರ್ಥಿಗಳು ಆನ್–ಲೈನನಲ್ಲಿ ಅಪ್‌ಲೋಡ್ ಮಾಡಬೇಕಾದ ದಾಖಲಾತಿಗಳು.</u>**

1) ಇತ್ತೀಚಿನ ಪಾಸ ಪೋರ್ಟ ಅಳತೆಯ ಭಾವಚಿತ್ರ ಮತ್ತು ಅಭ್ಯರ್ಥಿಯ ಸಹಿ.
2) ವಯಸ್ಸಿನ ದೃಢೀಕರಣ ಕುರಿತು ಎಸ್.ಎಸ್.ಎಲ್.ಸಿ ಅಂಕಪಟ್ಟಿ ಅಥವಾ ವರ್ಗಾವಣೆ ಪ್ರಮಾಣ ಪತ್ರ.
3) ಪದವಿ ಪರಿಕ್ಷೇಯ ಎಲ್ಲಾ ವರ್ಷಗಳ / ಸೆಮಿಸ್ಟರ್ ಮತ್ತು ಅಂತಿಮ ಫಲಿತಾಂಶದ ಅಂಕಪಟ್ಟಿ.
4) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗಗಳ ಮತ್ತು ಗ್ರಾಮೀಣ ಅಭ್ಯರ್ಥಿ/ಕನ್ನಡ ಮಾಧ್ಯಮ / ಮಾಜಿ ಸೈನಿಕ ಅಭ್ಯರ್ಥಿ / ಅಂಗವಿಕಲ ಅಭ್ಯರ್ಥಿ ಮೀಸಲಾತಿ ಸೌಲಭ್ಯ ಪಡೆಯಲಿಚ್ಚಿಸುವ ಅಭ್ಯರ್ಥಿಗಳು ಸರ್ಕಾರ ನಿಗದಿಪಡಿಸಿದ ನಮೂನೆಯಲ್ಲಿ ಸಂಬಂಧಿಸಿದ ಪ್ರಾಧಿಕಾರದಿಂದ ದೃಢೀಕರಣ ಪಡೆದ ಚಾಲ್ತಿ ಇರುವ ಪ್ರಮಾಣ.
5) ವಿಳಾಸ ಸಮರ್ಥಿಸುವ ದಾಖಲೆಗಳು (ಆಧಾರ ಕಾರ್ಡ್/ಓಟರ್ ಕಾರ್ಡ್/ಪಾನ ಕಾರ್ಡ/ಡ್ರೈವಿಂಗ್ ಲೈಸನ್ಸ್/ ರೇಶನ್ ಕಾರ್ಡ /ಸರಕಾರದಿಂದ ನೀಡಲ್ಪಡುವ ಪ್ರಮಾಣ ಪತ್ರ)
6) ಕಂಪ್ಯೂಟರ ಜ್ಞಾನ ಹೊಂದಿದ ಬಗ್ಗೆ ಪ್ರಮಾಣ ಪತ್ರ.

**8. ಅಭ್ಯರ್ಥಿಗಳು ಸಂದರ್ಶನ/ಪರಿಶೀಲನೆ ಕಾಲಕ್ಕೆ ಸಲ್ಲಿಸಬೇಕಾದ ದಾಖಲಾತಿಗಳು.**

1) ಅರ್ಜಿಯೊಂದಿಗೆ ಸಲ್ಲಿಸಿದ ಎಲ್ಲ ದಾಖಲಾತಿ/ಮಾಹಿತಿಗಳ ಮೂಲ ಪ್ರತಿಗಳನ್ನು ಸಂದರ್ಶನ / ಪರಿಶೀಲನೆ ಕಾಲಕ್ಕೆ ಸಲ್ಲಿಸತಕ್ಕದ್ದು.

2) ಮಹಿಳಾ ಅಭ್ಯರ್ಥಿಗಳ ಹೆಸರಿನಲ್ಲಿ ಬದಲಾವಣೆ ಆಗಿದ್ದಲ್ಲಿ ಈ ಬಗ್ಗೆ ನೋಟರಿ ದೃಢೀಕೃತ ಅಫಿಡೇವಿಟ್ ಪ್ರತಿ.

**9. ಆಯ್ಕೆ ವಿಧಾನ:**

- ❖ ಕ್ಲರ್ಕ್(ಸಹಾಯಕರು) ಹುದ್ದೆಗಳನ್ನು ಲಿಖಿತ ಪರೀಕ್ಷೆ ಮತ್ತು ಸಂದರ್ಶನ ಮೂಲಕ ಈ ಕೆಳಗಿನ ವಿಧಾನದನ್ವಯ ಆಯ್ಕೆ ಮಾಡಲಾಗುವುದು.
- ❖ ಅಭ್ಯರ್ಥಿಗಳು ಪದವಿ ಎಲ್ಲ ಸೆಮಿಸ್ಟರ್/ವರ್ಷಗಳವಾರು ಪರೀಕ್ಷೆಯಲ್ಲಿ ಪಡೆದ ನಿಗದಿತ ಅಂಕಗಳ ಪ್ರತಿಶತ ಆಧಾರದ ಮೇಲೆ ಅರ್ಹತೆ ಇರುವ ಎಲ್ಲಾ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಕರೆಯಲಾಗುವುದು.
- ❖ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ ಅದನ್ನು ಆಧರಿಸಿ ಅಭ್ಯರ್ಥಿಗಳನ್ನು 1:5 ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಪ್ರತಿಶತ 15 ಅಂಕಗಳನ್ನು ಸಂದರ್ಶನಕ್ಕೆ ನಿಗದಿಪಡಿಸಿದೆ.
- ❖ ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇಕಡ 85 ಕ್ಕಿಳಿಸಿ ಪ್ರಾಪ್ತವಾಗುವ ಅಂಕಗಳ ಶೇಕಡಾವಾರು ಪ್ರಮಾಣದ ಜೊತೆಗೆ ಸಂದರ್ಶನದಲ್ಲಿ ಪ್ರಾಪ್ತವಾಗುವ ಅಂಕಗಳನ್ನು ಕೂಡಿಸಿ ಅಂತಿಮ ಅರ್ಹತಾ ಪಟ್ಟಿಯನ್ನು (ಮೆರಿಟ್ ಲಿಸ್ಟ್) ತಯಾರಿಸಿ, ಮೀಸಲಾತಿ ನಿಯಮಗಳನ್ನು ಅನುಸರಿಸಿ ಆಯ್ಕೆ ಪಟ್ಟಿಯನ್ನು ಸಿದ್ದಪಡಿಸಿ ನೇಮಕಾತಿಯನ್ನು ಮಾಡಿಕೊಳ್ಳಲಾಗುವುದು.
- ❖ ಲಿಖಿತ ಪರೀಕ್ಷೆಯು ಈ ಕೆಳಗಿನ ವಿಷಯಗಳನ್ನೊಳಗೊಂಡ 200 ಅಂಕಗಳ ಒಂದು ಪ್ರಶ್ನೆ ಪತ್ರಿಕೆಯನ್ನು ಹೊಂದಿರುತ್ತದೆ.

| ಅ.ನಂ | ವಿಷಯ | ಅಂಕಗಳು |
|---|---|---|
| 1 | ಕನ್ನಡ ಭಾಷೆ | 50 |
| 2 | ಸಾಮಾನ್ಯ ಇಂಗ್ಲೀಷ | 25 |
| 3 | ಸಾಮಾನ್ಯ ಜ್ಞಾನ | 25 |
| 4 | ಸಹಕಾರಿ ವಿಷಯ | 50 |
| 5 | ಭಾರತ ಸಂವಿಧಾನ | 25 |
| 6 | ವಸ್ತುನಿಷ್ಟ ವಿಷಯಗಳಿಗೆ ಹಾಗೂ ಬ್ಯಾಂಕಿನ ಚಟುವಟಿಕೆಗಳು | 25 |
| | **ಒಟ್ಟು** | **200** |

**10. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು.**

1. ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ **www.kccbankdharwad.in** ಮೂಲಕ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಪೂರ್ವದಲ್ಲಿ ನೇಮಕಾತಿ ಪ್ರಕಟಣೆ ಮತ್ತು ಸೂಚನೆಗಳನ್ನು ಕಡ್ಡಾಯವಾಗಿ ಓದಿ ಮುಂದುವರಿಯುವುದು.

2. ಮೊಬೈಲ್ ಕ್ಯಾಮರಾದಿಂದ ಸೆರೆ ಹಿಡಿದ ಸ್ಪಷ್ಟತೆ ಇಲ್ಲದಿರುವ ದಾಖಲಾತಿಗಳನ್ನು /ಮಾಹಿತಿಗಳನ್ನು ಅಪ್‌ಲೋಡ ಮಾಡಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಸೇವಾ ಅನುಭವದ ಪ್ರಮಾಣ ಪತ್ರ ಸಲ್ಲಿಸುವವರು ಆಯಾ ಸಂಸ್ಥೆಯಿಂದ ಪಡೆದ ಪ್ರಮಾಣ ಪತ್ರವನ್ನು ದೃಢೀಕರಿಸಿ ಅಪ್‌ಲೋಡ್ ಮಾಡತಕ್ಕದ್ದು.
4. ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊರತುಪಡಿಸಿ ಇತರೇ ಯಾವುದೇ ತತ್ಸಮಾನ/ಸಮನಾಂತರ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲ.
5. ಅರ್ಜಿಯಲ್ಲಿ ನಮೂದಿಸಿರುವ ಅಂಕ ಪಟ್ಟಿಗಳು/ ಇತರೇ ದಾಖಲಾತಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವದಿಲ್ಲ.
6. ಆಯ್ಕೆಯಾದ ನಂತರ ಅಭ್ಯರ್ಥಿಗಳ ದಾಖಲಾತಿಗಳ ನೈಜತೆಯನ್ನು ಸಂಬಂಧಪಟ್ಟ ಸಂಸ್ಥೆ/ಪ್ರಾಧಿಕಾರ/ವಿಶ್ವ ವಿದ್ಯಾನಿಲಯಗಳಿಂದ ಧೃಡೀಕರಿಸಿಕೊಳ್ಳುವ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.
7. ಅಗತ್ಯ ದಾಖಲಾತಿಗಳ ಸೈಜು , ಗಾತ್ರ ಇತ್ಯಾದಿಗಳು ಅಪ್‌ಲೋಡ್ ಮಾಡುವ ಸಂದರ್ಭದಲ್ಲಿ ಕಂಪ್ಯೂಟರ ಪರದೆಯಲ್ಲಿ ಬರುವ ಗಾತ್ರಕ್ಕನುಗುಣವಾಗಿ ಸ್ಪಷ್ಟವಾಗಿ ಕಾಣುವಂತೆ ಸ್ಕ್ಯಾನ್ ಮಾಡಿ ಅಪ್‌ಲೊಡ್ ಮಾಡತಕ್ಕದ್ದು.
8. ನೇಮಕಾತಿ ಪ್ರಕ್ರಿಯೆಯು ಕರ್ನಾಟಕ ಸರಕಾರವು ಕಾಲಕಾಲಕ್ಕೆ ನೀಡುವ ನಿರ್ದೇಶನಗಳು ಹಾಗೂ ಆದೇಶಕ್ಕೆ ಒಳಪಟ್ಟಿರುತ್ತದೆ.
9. ಮೀಸಲಾತಿ ಕೋರ ಬಯಸುವ ಅಭ್ಯರ್ಥಿಗಳು ಮೀಸಲಿರಿಸಿದ ವರ್ಗಗಳಲ್ಲಿ ಸಮತಳ ಮೀಸಲಾತಿಗಳ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ಹುದ್ದೆಗಳನ್ನು ಅದೇ ವರ್ಗಕ್ಕೆ ಸೇರಿದ ಇತರೇ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.
10. ನೇಮಕಾತಿಯನ್ನು ಯಾವುದೇ ಕಾರಣವನ್ನು ನೀಡದೆ ಮುಂದೂಡುವ ಮತ್ತು ರದ್ದುಪಡಿಸುವ ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.
11. ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷದ ಅವಧಿಯ ಪರೀಕ್ಷಾರ್ಹ ಸೇವೆಯಲ್ಲಿ ಇರಬೇಕಾಗುವುದು. ಮತ್ತು ಆಯ್ಕೆಗೊಂಡ ಅಭ್ಯರ್ಥಿಗಳು ಬ್ಯಾಂಕು ಸೂಚಿಸಲ್ಪಟ್ಟ ಭದ್ರತೆಯೊಂದಿಗೆ ನಿಯೋಜಿಸಿದ ಶಾಖೆಯಲ್ಲಿ ಕಾರ್ಯನಿರ್ವಹಿಸಬೇಕು ಹಾಗೂ ಅಭ್ಯರ್ಥಿಯ ಸೇವೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಅಂತವರ ಸೇವೆಯನ್ನು ಮಾತ್ರ ಖಾಯಂಗೊಳಿಸಲಾಗುವುದು.
12. ಆಯ್ಕೆಯಾದ ಅಭ್ಯರ್ಥಿಗಳು ಬ್ಯಾಂಕಿನ ನಿಯಮಾನುಸಾರ ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ವ ನಿಯಮಗಳಿಗೊಳಪಟ್ಟು ಕಾರ್ಯನಿರ್ವಹಿಸಬೇಕಾಗುತ್ತದೆ.
13. ಖೊಟ್ಟಿ ಮಾಹಿತಿ/ ದಾಖಲಾತಿಗಳ ಸಲ್ಲಿಕೆಯು ಶಿಕ್ಷಾರ್ಹ ಅಪರಾಧವಾಗಿರುತ್ತದೆ.

**11.ವಿಶೇಷ ಸೂಚನೆ:**

* ಲಿಖಿತ ಪರೀಕ್ಷೆಗೆ ಅರ್ಹವಿರುವ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ಹಾಗೂ ಲಿಖಿತ ಪರೀಕ್ಷೆಯ ದಿನಾಂಕ, ಸ್ಥಳ ಮತ್ತು ಸಮಯವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು. ಅರ್ಹ ಅಭ್ಯರ್ಥಿಗಳ ಲಿಖಿತ ಪರೀಕ್ಷೆಯ ಪ್ರವೇಶ ಪತ್ರ (**Hall Ticket**)ಗಳನ್ನು ಅಧಿಕೃತ ವೆಬ್‌ಸೈಟ್ **www.kccbankdharwad.in** ದಿಂದ ಡೌನಲೋಡ ಮಾಡಿಕೊಂಡು ಲಿಖಿತ ಪರೀಕ್ಷೆಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ಹಾಜರಪಡಿಸತಕ್ಕದ್ದು. ಲಿಖಿತ ಪರೀಕ್ಷೆಗೆ/ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಿಂದಲೇ ಹಾಜರಾಗತಕ್ಕದ್ದು.

* ಆನಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Helpline): **9036377735** ಮತ್ತು ಇಮೇಲ್ recruitapp20@gmail.com ನ್ನು ಸಂಪರ್ಕಿಸಿ ಅಗತ್ಯ ಮಾಹಿತಿಗಳನ್ನು ಪಡೆಯಬಹುದು.

ಸದಸ್ಯ ಕಾರ್ಯದರ್ಶಿ, ನೇಮಕಾತಿ ಸಮಿತಿ ಮತ್ತು
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಕೆ.ಸಿ.ಸಿ. ಬ್ಯಾಂಕ ಲಿ., ಧಾರವಾಡ.